# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6292\2014\ಸನಿಕಾಸ-1 ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:09/11/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಎಸ್.ಎಸ್.ಮಹದೇವ ಬಿನ್ ಸ್ವಾಮಿನಾಯ್ಕ, ಸತಿ ಗ್ರಾಮ, ಕಸಬಾ ಹೋಬಳಿ, ಕಗ್ಗೆರೆ ಅಂಚೆ, ಕೆಆರ್ ನಗರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಮೈಸೂರು ಜಿಲ್ಲೆ ಕೆಆರ್ ನಗರ ತಾಲ್ಲೂಕ್ ಕಸಬಾ ಹೋಬಳಿ ಕಗ್ಗೆರೆ ಅಂಚೆ ಸತಿ ಗ್ರಾಮ ಶ್ರೀ.ಎಸ್.ಎಸ್.ಮಹದೇವ ಬಿನ್ ಸ್ವಾಮಿ ನಾಯ್ಕ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಕೆಆರ್ ನಗರ ತಾಲ್ಲೂಕ್ 1) ಲಾಲನದೇವನ ಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ.ನಾಗರಾಜ್ ಮತ್ತು 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ.ಸಿದ್ದಲಿಂಗಮೂರ್ತಿ (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಮೈಸೂರು ಜಿಲ್ಲೆಯ ಕೆಆರ್ ನಗರ ತಾಲ್ಲೂಕ್ ಲಾಲನದೇವನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟ ಶಾಂತಿ ಗ್ರಾಮದ ಶ್ರೀ.ಕೆಂಪೇಗೌಡ ಮತ್ತು ಶ್ರೀ.ಮಾಯಣ್ಣಗೌಡ ಎಂಬುವವರು ಜನತಾ ಬಡಾವಣೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಸುಮಾರು 10 ರಿಂದ 15 ಅಡಿ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದಾರೆ. ಸದರಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಎದುರುದಾರರಿಗೆ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

Sd/-

ಶಾಂತಿ ಗ್ರಾಮದ ಶ್ರೀ.ಕೆಂಪೇಗೌಡ ಮತ್ತು ಶ್ರೀ.ಮಾಯಣ್ಣಗೌಡ ರವರಿಗೆ ತಾಲ್ಲೂಕ್ ಅಭಿವೃದ್ಧಿ ಮಂಡಳಿ, ಕೆಆರ್ ನಗರ ರವರಿಂದ ಹಕ್ಕುಪತ್ರ ನೀಡಿದ್ದು, ದಿ:18/03/10ರಂದು ಶ್ರೀ.ಕೆಂಪೇಗೌಡ ರವರಿಗೆ ಪೂರ್ವ–ಪಶ್ಚಿಮ 40 ಅಡಿ, ಉತ್ತರ–ದಕ್ಷಿಣ 40 ಅಡಿಯಲ್ಲಿ, ಅದೇ ರೀತಿ ಶ್ರೀ.ಮಾಯಣ್ಣಗೌಡ ರವರಿಗೆ ಅದೇ ದಿನಾಂಕದಂದು ಪೂರ್ವ–ಪಶ್ಚಿಮ 40 ಅಡಿ, ಉತ್ತರ–ದಕ್ಷಿಣ 40 ಅಡಿ ಮನೆ ನಿರ್ಮಿಸಲು ಈ ಹಿಂದೆ ಪಂಚಾಯತ್ ವತಿಯಿಂದ ಪರವಾನಗಿಯನ್ನು ನೀಡಿದ್ದು, 4 ತಿಂಗಳೊಳಗಾಗಿ ಮನೆ ನಿರ್ಮಾಣ ಮಾಡುವುದಾಗಿ ಲಿಖಿತ ವರದಿಯನ್ನು ಸಲ್ಲಿಸಿದ್ದಾರೆ. ಸದರಿ ದೂರಿಗೆ ಸಂಬಂಧಿಸಿದಂತೆ, ದಿ:17/03/14ರಂದು ಸ್ಥಳ ಪರಿಶೀಲನೆ ಮಾಡಲಾಗಿ, ಶ್ರೀ.ಕೆಂಪೇಗೌಡ ರವರು ಪಂಚಾಯತ್‌ನಿಂದ ನೀಡಿದ ಪರವಾನಗಿಗೆ ವಿರುದ್ಧವಾಗಿ ಮನೆ ನಿರ್ಮಿಸಿದ್ದು, ದಕ್ಷಿಣ ಭಾಗದ ಪೂರ್ವ ದಿಕ್ಕಿನ ಕಡೆ 4 ಅಡಿ, ಪಶ್ಚಿಮ ದಿಕ್ಕಿನ ಕಡೆಗೆ 8 ಅಡಿ ಸ್ಥಳವನ್ನು ಉಳಿಸಿಕೊಂಡು ರಸ್ತೆ ಒತ್ತುವರಿ ಮಾಡಿ, ಮನೆ ನಿರ್ಮಿಸಿದ್ದಾರೆ. ಅದೇ ರೀತಿ, ಶ್ರೀ.ಮಾಯಣ್ಣಗೌಡ ರವರು ಸಹ ಪಂಚಾಯತ್‌ನಿಂದ ನೀಡಿದ ಪರವಾನಗಿಗೆ ವಿರುದ್ಧವಾಗಿ ಮನೆ ನಿರ್ಮಿಸಿದ್ದು, ದಕ್ಷಿಣ ಭಾಗದ ಪೂರ್ವ ದಿಕ್ಕಿನ ಕಡೆ 3 ಅಡಿ, ಪಶ್ಚಿಮ ದಿಕ್ಕಿನ ಕಡೆಗೆ 4 ಅಡಿ ಸ್ಥಳವನ್ನು ಉಳಿಸಿಕೊಂಡು ರಸ್ತೆಗೆ ಸೇರಿದಂತೆ ಮನೆ ನಿರ್ಮಿಸಿದ್ದಾರೆ. ಇಬ್ಬರೂ ಸಹ ಮನೆ ಮುಂಭಾಗದ ಉತ್ತರ ಭಾಗಕ್ಕೆ, ಪೂರ್ವ–ಪಶ್ಚಿಮ 19 ಅಡಿ, ದಕ್ಷಿಣೋತ್ತರ 7 ಅಡಿಗಳಲ್ಲಿ ಕಟ್ಟಿಕೊಂಡಿರುವುದಾಗಿ ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

5. ಸದರಿ ದೂರಿನ ಬಗ್ಗೆ 2ನೇ ಎದುರುದಾರರಿಂದ ವರದಿಯನ್ನು ಕೇಳಲಾಗಿ, 2ನೇ ಎದುರುದಾರರು ತಮ್ಮ ವರದಿಯಲ್ಲಿ, ಸದರಿ ಸಾರ್ವಜನಿಕ ರಸ್ತೆಯ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿದೆಯೆಂದು ಹೇಳಿದ್ದಾರೆ.

6. ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರ ವರದಿಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸದರಿ ಕಟ್ಟಡದ ಮಾಲೀಕರಾದ ಶ್ರೀ.ಕೆಂಪೇಗೌಡ ಬಿನ್ ಕೆ.ಮಾಯಣ್ಣ ಎಂಬುವವರು ದಿ:18/03/10ರಂದು ಅರ್ಜಿ ಸಲ್ಲಿಸಿ, ತಮಗೆ ಸಂಬಂದಪಟ್ಟ ಪೂರ್ವ–ಪಶ್ಚಿಮ 40 ಅಡಿ, ದಕ್ಷಿಣೋತ್ತರ 40 ಅಡಿ ವಿಸ್ತೀರ್ಣದಲ್ಲಿ ಮನೆ ಕಟ್ಟಿಕೊಳ್ಳುವ ಉದ್ದೇಶದಿಂದ ಪರವಾನಗಿ ಕೋರಿದ್ದು, ಅದರಂತೆ ಎದುರುದಾರರ ಕಛೇರಿಯಿಂದ ಕಟ್ಟಡ ಪರವಾನಗಿ ಮಂಜೂರಾಗಿದೆ. ಸದರಿ ಶ್ರೀ.ಕೆಂಪೇಗೌಡ ರವರಿಗೆ ಸಂಬಂಧಪಟ್ಟ ನಿವೇಶನದ ಚಕ್ಕುಬಂಧಿ, ಪೂರ್ವಕ್ಕೆ ಶ್ರೀ.ಮಾಯಣ್ಣ ರವರ ಮನೆ, ಪಶ್ಚಿಮ ಮತ್ತು

ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಶ್ರೀ.ಕೆಂಪನಾಯ್ಕರ ಮನೆ, ಅದೇ ರೀತಿ, ಶ್ರೀ.ಕೆ.ಮಾಯಣ್ಣ ರವರಿಗೆ ಸಂಬಂಧಪಟ್ಟ ನಿವೇಶನದ ವಿಸ್ತೀರ್ಣ ಪಶ್ಚಿಮಕ್ಕೆ ಶ್ರೀ.ಕೆಂಪೇಗೌಡರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಗಲ್ಲಿ ಮತ್ತು ಶ್ರೀ.ಕೆಂಪನಾಯ್ಕರ ಮನೆ ಇದ್ದು, ಶ್ರೀ.ಕೆಂಪೇಗೌಡ ರವರು ತಮ್ಮ ನಿವೇಶನದ ವಿಸ್ತೀರ್ಣ 40x40 ಅಡಿಗೆ ಪೂರ್ಣವಾಗಿ ಮನೆ ಕಟ್ಟಿದ್ದು, ದಕ್ಷಿಣ ಭಾಗದ ಪೂರ್ವ ದಿಕ್ಕಿಗೆ 4 ಅಡಿ, ಪಶ್ಚಿಮ ದಿಕ್ಕಿಗೆ 8 ಅಡಿ ಸ್ಥಳ ಉಳಿಸಿಕೊಂಡು, ಹೆಚ್ಚುವರಿಯಾಗಿ ರಸ್ತೆ ಸೇರಿದಂತೆ ಮನೆ ನಿರ್ಮಿಸಿಕೊಂಡಿದ್ದಾರೆ. ಅದೇ ರೀತಿ, ಶ್ರೀ.ಕೆ.ಮಾಯಣ್ಣ ರವರು ತಮ್ಮ ನಿವೇಶನದ ವಿಸ್ತೀರ್ಣ 40x40 ಅಡಿಗೆ ಪೂರ್ಣವಾಗಿ ಮನೆ ಕಟ್ಟಿದ್ದು, ದಕ್ಷಿಣ ಭಾಗದ ಪೂರ್ವ ದಿಕ್ಕಿಗೆ 3 ಅಡಿ, ಪಶ್ಚಿಮ ದಿಕ್ಕಿಗೆ 4 ಅಡಿ ಸ್ಥಳ ಉಳಿಸಿಕೊಂಡು, ಹೆಚ್ಚುವರಿಯಾಗಿ ರಸ್ತೆ ಸೇರಿದಂತೆ ಮನೆ ನಿರ್ಮಿಸಿಕೊಂಡಿದ್ದಾರೆ. ಈ ಇಬ್ಬರ ಮನೆ ಮುಂಭಾಗ ಉತ್ತರ ಭಾಗಕ್ಕೆ ಪೂರ್ವ–ಪಶ್ಚಿಮ 19 ಅಡಿ, ದಕ್ಷಿಣೋತ್ತರದಲ್ಲಿ 7 ಅಡಿಗಳಲ್ಲಿ ಮನೆ ಕಟ್ಟಿಕೊಂಡಿರುವುದು ಕಂಡು ಬಂದಿದೆ.

8. ಆದ್ದರಿಂದ, ಸದರಿ ಕಟ್ಟಡದ ಮಾಲೀಕರು ಅನಧಿಕೃತವಾಗಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ, ಕಟ್ಟಡ ನಿರ್ಮಿಸಿರುವುದರಿಂದ ಸದರಿ ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸಿ, ಸದರಿ ರಸ್ತೆಯನ್ನು ಸಾರ್ವಜನಿಕ ಉಪಯೋಗಕ್ಕೆ ಅವಕಾಶ ಕಲ್ಪಿಸಿಕೊಡಲು ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಕೇಳಿದೆ.

Sd/- 9.11.17

**(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**